**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.**

**ಓ.ಎಸ್.ಸಂಖ್ಯೆ.599/2022** ಪಿ.ಡಬ್ಲೂ.1

**ದಿನಾಂಕಃ 06.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಎ.ಎಂ.ವಿ. ವಕೀಲರಿಂದಃ**

**1.** 3 ನೇ ಪ್ರತಿವಾದಿಯು ಈ ದಾವೆಯಲ್ಲಿ ಏನು ತಕರಾರು ಹಾಕಿದ್ದಾರೆ ಎಂದು ನಾನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿಲ್ಲ. 1 ರಿಂದ 3 ನೇ ಪ್ರತಿವಾದಿಯರು ದಾವಾ ಐಟಂ ನಂ.4 ರಿಂದ 7 ರ ಮಾರಟದ ಬಗ್ಗೆ ತಕರಾರಿನಲ್ಲಿ ಹೇಳಿದ್ದಾರೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ.4 ಆಸ್ತಿಯನ್ನು ಪ್ರತಿವಾದಿ 1 ರಿಂದ 3 ರವರು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಆ ಸ್ವತ್ತು ಮಾರಾಟ ಮಾಡುವಾಗ ನನ್ನ ಗಂಡ ಮಧ್ಯಸ್ಥಿಕೆವಹಿಸಿ ಮಾರಾಟ ಮಾಡಿದ್ದಾರೆ ಎಂದರೆ ಅವರು ಆ ರೀತಿ ಮಾಡಿರಬಹುದು ಅದು ನನ್ನ ಗಂಡನಿಗೆ ಗೊತ್ತು ಎಂದು ಹೇಳುತ್ತಾರೆ. ದಾವಾ ಐಟಂ ನಂ.5 ರಿಂದ 7 ಸ್ವತ್ತುಗಳು ಮಾರಾಟವಾಗಿರುವ ಬಗ್ಗೆ ನನ್ನ ಗಂಡನಿಗೆ ಗೊತ್ತು ನನಗೆ ಗೊತ್ತಿಲ್ಲ. ನಾನು ಆ ರೀತಿ ಮಾರಾಟ ಮಾಡಿರುವ ಬಗ್ಗೆ ಈ ದಾವೆಯಲ್ಲದೆ ಬೇರೆ ಎಲ್ಲೂ ಪ್ರಶ್ನಿಸಿಲ್ಲ.

**2.** ಈ ದಾವೆಯು ಹಾಕಿದ ಬಳಿಕ ನಾನು ದಾವಾ ಐಟಂ ನಂ.4 ರ ಸ್ವತ್ತಿನ ವಿಚಾರವಾಗಿ 4 ನೇ ಪ್ರತಿವಾದಿಯ ಜೊತೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಗೊತ್ತಿಲ್ಲ. ಅದು ನನ್ನ ಗಂಡನಿಗೆ ಗೊತ್ತು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯು ದಾವಾ ಐಟಂ ನಂ.5 ರಿಂದ 7 ಸ್ವತ್ತುಗಳನ್ನು ಒಬ್ಬನೇ ಮಾರಾಟ ಮಾಡಿಕೊಂಡಿದ್ದಾನೆ ಎಂದರೆ ನಿಜ. 3 ನೇ ಪ್ರತಿವಾದಿಯು ಆ ಆಸ್ತಿಗಳನ್ನು ಮಾರಾಟ ಮಾಡಿಲ್ಲ ಎಂದರೆ ನಿಜ. ದಾವಾ ಐಟಂ ನಂ.1 ರಿಂದ 3 ರ ಸ್ವತ್ತುಗಳಲ್ಲಿ ಪ್ರತಿವಾದಿ 1 ರಿಂದ 3 ರವರು ಅನುಭವದಲ್ಲಿದ್ದಾರೆ ಎಂದರೆ ನಿಜ. 3 ನೇ ಪ್ರತಿವಾದಿಗು ಸಹ ದಾವಾ ಐಟಂ ನಂ.4 ರಿಂದ 7 ರಲ್ಲಿ ಭಾಗ ಇದೆ ಎಂದರೆ ಗೊತ್ತಿಲ್ಲ.

(ಈ ಹಂತದಲ್ಲಿ ಉಳಿದ ಪ್ರತಿವಾದಿಯರ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರುತ್ತಾರೆ, ಕಾಲಾವಕಾಶ ನೀಡಿ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

Sd/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಹೊಸಕೋಟೆ.**